# ಭಗವದ್ಗೀತೆಯಲ್ಲಿ ಸರ್ವಾತ್ಮಭಾವ

ಸ್ವಾಮಿ ಯುಕ್ತೇಶಾನಂದ

ಭಗವದ್ಗೀತೆಯಲ್ಲಿ ಬರುವ ವಿಶ್ವವ್ಯಾಪಕ ದೃಷ್ಟಿಕೋನ ಸಮಸ್ತ ಮಾನವ ಜನಾಂಗವನ್ನೂ, ಇಡೀ ವಿಶ್ವವನ್ನೂ ಆವರಿಸುವಂತಹದು. ದಿವ್ಯ ಆಧ್ಯಾತ್ಮಿಕ ನೆಲೆಯ ಈ ಭಾವವು ಗೀತೆಯ ಅಂತರಗಂಗೆಯಾಗಿ ಗೋಚರವಾಗುತ್ತದೆ. ಈ ಕುರಿತು ವಿವರಿಸಿರುವ ಸ್ವಾಮೀಜಿಯವರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥರು; ಅವರು ಉತ್ತಮ ಪ್ರವಚನಕಾರರೂ, ಸಂಘಟಕರೂ ಆಗಿದ್ದಾರೆ.

**ಭ**ಗವದ್ಗೀತೆಯು ಭಗವಂತನ ನೇರ ವಾಣಿ, ಶಾಸನ ಮಾಡುವ ಉಪದೇಶ, ಶಾಸ್ತ್ರ, ಮಾರ್ಗದರ್ಶಕ, ಮನುಷ್ಯನ ಶ್ರೇಷ್ಠ ಹಿತವನ್ನು ಬೋಧಿಸುವ ಸಖ!

ಮನುಷ್ಯ ಜೀವನದ ಹಲವಾರು ಉನ್ನತ ಆಯಾಮಗಳನ್ನು ಅದರಲ್ಲಿ ತಿಳಿಸಲಾಗಿದೆ. ಮಾನವನ ಮನಸ್ಸು ಅದರ ಉಚ್ಚ-ನೀಚ ಸ್ವಭಾವ, ಅದನ್ನು ತರಬೇತಿಗೊಳಿಸುವ ಉಪಾಯ, ಮನುಷ್ಯನ ಅತ್ಯುನ್ನತ ಸ್ಥಿತಿ (ಆಧ್ಯಾತ್ಮಿಕ ಅನುಭವ-ಯೋಗ ಸ್ಥಿತಿ) – ಇವೆಲ್ಲವನ್ನು ಲಲಿತ ಗಂಭೀರ ಮಾತುಗಳಲ್ಲಿ ಬೋಧಿಸಲಾಗಿದೆ.

ಭಗವದ್ಗೀತೆಯ ಪಠಣದಿಂದ ಪುಣ್ಯಪ್ರಾಪ್ತಿಯೆಂದಷ್ಟೇ ತಿಳಿದರೆ ಆ ಮಹಾಶಾಸ್ತ್ರದ ವ್ಯಾಪ್ತಿ – ಪ್ರಯೋಜನಗಳನ್ನು ತುಂಬ ಕುಂಠಿತವಾಗಿಸಿದಂತೆ. ಭಗವದ್ಗೀತೆಯ ವಾಚನದೊಂದಿಗೆ ಅಲ್ಲಿ ನೀಡಿರುವ ಉಪದೇಶವನ್ನು ತಿಳಿಯುವ ಪ್ರಯತ್ನ ಮಾಡಬೇಕು. ಬಲ್ಲವರಿಂದ ತಿಳಿಯಬೇಕು. ಭಾಷ್ಯಕಾರರ ವಿವರಣೆಗಳಿಂದ ಸ್ಪಷ್ಟ ಪಡಿಸಿಕೊಳ್ಳಬಹುದು ಮತ್ತು ಎಲ್ಲಕ್ಕಿಂತ ಪ್ರಭಾವಶಾಲಿಯಾದ ಸ್ವಯಂ ಗೀತಾಚಾರ್ಯರ, ಸಂತರ, ಅನುಭವಿಗಳ ಜೀವನದ ಅಧ್ಯಯನದಿಂದ ಇನ್ನಷ್ಟು ಸ್ಪಷ್ಟತೆಯನ್ನು, ಸ್ಫೂರ್ತಿಯನ್ನು ಪಡೆದುಕೊಳ್ಳಬಹುದು.

ಮನುಷ್ಯನ ಮನಸ್ಸು ಯಾವ ಮಟ್ಟದಲ್ಲಿರುತ್ತದೆಯೋ ಅವನ ವರ್ತನೆ ಆ ರೀತಿಯಾಗಿರುತ್ತದೆ. ಅದರಂತೆ ಮನುಷ್ಯನು ಪಶುಭಾವ, ದೇಹಭಾವ, ದೇವಭಾವ (ಆತ್ಮಭಾವ), ಸರ್ವಾತ್ಮ ಭಾವಗಳಲ್ಲಿ ಇರುತ್ತಾನೆ. ಅಂದರೆ, ಪಶುವಿನಂತೆ, ಸಾಮಾನ್ಯ ಮಾನವನಂತೆ, ಆತ್ಮಾನುಭವಿಯಾಗಿ ಮತ್ತು ಇವೆಲ್ಲವನ್ನೂ ಮೀರಿದ ಸರ್ವಾತ್ಮಾನುಭವಿಯಾಗಿ ಇರುತ್ತಾನೆ. ಈ ಸರ್ವಾತ್ಮ ಭಾವ ಎನ್ನುವುದು ಸರ್ವರಲ್ಲಿಯೂ, ಸರ್ವದರಲ್ಲಿಯೂ ಆತ್ಮ ಭಾವವನ್ನೇ ಅನುಭವಿಸುವ ಅಥವಾ ಎಲ್ಲವೂ ಆತ್ಮವೆಂದು ಅನುಭವಿಸುವ ಸ್ಥಿತಿ.

ಭಗವದ್ಗೀತೆಯಲ್ಲಿ ಈ ಸರ್ವಾತ್ಮಭಾವದ ಉಲ್ಲೇಖ ಕೆಲವೆಡೆ ಇದೆ. ನಾಲ್ಕನೇ ಅಧ್ಯಾಯದಲ್ಲಿ ಶ್ರೀ ಭಗವಂತನು ಹೀಗೆ ತಿಳಿಸಿದ್ದಾನೆ.

**ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಂಡವ ।**
**ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ॥**

'ಎಲೈ ಪಾಂಡುಪುತ್ರನೇ! ಯಾವ ಜ್ಞಾನವನ್ನು ಪಡೆದುಕೊಂಡರೆ ಮತ್ತೆ ಹೀಗೆ ಮರುಳುಗೊಳ್ಳುವುದಿಲ್ಲವೋ, ಯಾವುದರಿಂದ ಎಲ್ಲಾ ಜೀವಿಗಳನ್ನೂ ಆತ್ಮದಲ್ಲಿಯೂ ಹಾಗೂ ನನ್ನಲ್ಲಿ ನೋಡುವೆಯೋ (ಅಂತಹ ಜ್ಞಾನವನ್ನು ಹೊಂದು).'

ಇಲ್ಲಿ 'ಜ್ಞಾನ' ಶಬ್ದದಿಂದ ಸರ್ವಾತ್ಮಭಾವವನ್ನು ಹೇಳಲಾಗಿದೆ. ಈ ರೀತಿಯ ಅನುಭವದಿಂದ ನಿಜವಾದ ಬದಲಾವಣೆ ಯಾಗುತ್ತದೆಯೋ ಅಥವ ಅದು ಬರೀ ವೈಯಕ್ತಿಕ ಮಟ್ಟದಲ್ಲಿ ಭಾವನೆಯೋ ಎಂಬ ಸಂಶಯ ಬರಬಹುದು.

ನಿಜವಾದ ಆಧ್ಯಾತ್ಮಿಕ ಅನುಭವ-ಯೋಗ ಸ್ಥಿತಿಯಿಂದ ಉಂಟಾಗುವ ಸಮಗ್ರ ದೃಷ್ಟಿಯು ನಮಗೂ ಇತರರಿಗೂ ಇರುವ ಎಲ್ಲಾ ವ್ಯತ್ಯಾಸಗಳನ್ನು ಅಳಿಸಿಹಾಕಿ ನಮ್ಮ ಪ್ರಜ್ಞೆಯ ಶಾಶ್ವತವಾದ ಅಡ್ಡ-ಅಗಲಗಳಲ್ಲಿ ಬದಲಾವಣೆಯನ್ನು ತಂದು ಕೊಡುತ್ತದೆ.

ಉದಾಹರಣೆ: ನಾವು ಕನಸು ಕಾಣುತ್ತಿರುವಾಗ ನಾವು ಕಾಣ ದ ಕನಸಿನ ಎಲ್ಲಾ ವ್ಯಕ್ತಿ-ವಸ್ತುಗಳು ಸತ್ಯವೆಂದು ತೋರುತ್ತದೆ. ಆದರೆ ಕನಸು ಮುಗಿದು ಜಾಗೃತಾವಸ್ಥೆಗೆ ನಾವು ಬಂದಾಗ ಕನಸಿನ ವ್ಯಕ್ತಿ ವಸ್ತುಗಳೆಲ್ಲ ಜಾಗೃತಾವಸ್ಥೆಯ ಪ್ರಜ್ಞೆಯಲ್ಲಿ ಕರಗಿ ಹೋಗುತ್ತವೆ. ಹೇಗೆ ಈ ಪ್ರಜ್ಞೆಯೇ ಕನಸಿನ ಎಲ್ಲಾ ವ್ಯಕ್ತಿ-ವಸ್ತುಗಳಿಗೆ ಆಧಾರವಾಗಿತ್ತೋ, ಅದೇ ರೀತಿ ಯೋಗ ಸ್ಥಿತಿಯಲ್ಲಿ ಪರಮಾತ್ಮನೇ ನಾವು ಕಾಣುವ ಎಲ್ಲಾ ವ್ಯಕ್ತಿ-ವಸ್ತುಗಳ ಮೂಲ ಆಧಾರವೆಂದು ಅನುಭವಕ್ಕೆ ಬರುತ್ತದೆ. ಈ ನಿಜವಾದ ಅನುಭವದಿಂದ ಉಂಟಾದ ಅನುಭವವು ಶಾಶ್ವತವಾಗಿದ್ದು ಆ ವ್ಯಕ್ತಿಯು ಮತ್ತೆ ಭಯ-ಸಂಕಟಗಳನ್ನು ತಂದೊಡ್ಡುವ ಭ್ರಮೆಗೆ ಒಳಗಾಗುವುದಿಲ್ಲ. ಅಂಥಾ ವ್ಯಕ್ತಿಯ ಅಹಂ ಆಧ್ಯಾತ್ಮಿಕವಾಗಿ ಜಾಗೃತವಾಗಿ ಮತ್ತು ಪರಿಶುದ್ಧವಾಗಿ ಅವಿದ್ಯೆಯಿಂದ ಉಂಟಾಗುವ ಅಪರಿಪೂರ್ಣತೆ -ತಾಪ-ಪಾಪಗಳಿಂದ ವಿಮುಕ್ತವಾಗಿರುತ್ತದೆ. ಆ ವ್ಯಕ್ತಿ ವಿವೇಕಿಯೂ, ಪ್ರಜ್ಞಾವಂತನೂ ಆಗುತ್ತಾನೆ.

ಭಗವಂತನು ಆರನೇ ಅಧ್ಯಾಯದಲ್ಲಿ ಈ ವಿಷಯವನ್ನು ಇನ್ನಷ್ಟು ಸ್ಪಷ್ಟಪಡಿಸಿದ್ದಾನೆ. ಅದಕ್ಕೆ ಸಂಬಂಧಿಸಿದ ಶ್ಲೋಕಗಳು *(೨೯-೩೨)* ಇಲ್ಲಿವೆ.

**ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ।**
**ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನ:।। *(೨೯)***

'ಯೋಗದಿಂದ ಯುಕ್ತವಾದ ಮನಸ್ಸುಳ್ಳ (ಸಾಧನೆಯಿಂದ ಆಧ್ಯಾತ್ಮಿಕ ಅಂತರ್ದೃಷ್ಟಿಯುಳ್ಳ) ಮತ್ತು ಸಮದರ್ಶಿಯಾದ (ಯೋಗಿಯೂ) ಆತ್ಮನನ್ನು ಎಲ್ಲ ಭೂತಗಳಲ್ಲಿಯೂ (ಎಲ್ಲದರಲ್ಲಿಯೂ, ಸಜೀವ - ನಿರ್ಜೀವ ಎಲ್ಲಾ ವಸ್ತುಗಳಲ್ಲಿಯೂ), ಎಲ್ಲಾ ವಸ್ತುಗಳನ್ನು ಆತ್ಮದಲ್ಲಿ ಕಾಣುತ್ತಾನೆ. (ತನಗಿಂತ ಬೇರೆಯಲ್ಲ ಎಂದು ಅನುಭವಿಸುತ್ತಿರುತ್ತಾನೆ.)'

**ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ।**
**ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ।। *(೩೦)***

'ಯಾರು ನನ್ನನ್ನು ಎಲ್ಲೆಡೆಯಲ್ಲಿ ನೋಡುವನೋ ಮತ್ತು ಎಲ್ಲವನ್ನು ನನ್ನಲ್ಲಿ ನೋಡುವನೋ ಅವನಿಗೆ ನಾನು ನಾಶವಾಗುವುದಿಲ್ಲ, ಮತ್ತು ನನಗೆ ಅವನು ನಾಶವಾಗುವುದಿಲ್ಲ.'

**ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತ:।**
**ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ ।। *(೩೧)***

'ಸರ್ವಭೂತಗಳ ಏಕತ್ವಾನುಭವದಲ್ಲಿ ನೆಲೆನಿಂತು ಯಾವ ಯೋಗಿಯು ಎಲ್ಲಾ ಭೂತಗಳಲ್ಲಿಯೂ ನೆಲೆಸಿರುವ ನನ್ನನ್ನು ಭಜಿಸುವನೋ, ಆ ಯೋಗಿಯು ಹೇಗೇ ಇದ್ದರೂ ನನ್ನಲ್ಲಿ ನೆಲೆಸಿರುತ್ತಾನೆ.'

**ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ।**
**ಸುಖಂ ವಾ ಯದಿ ವಾ ದು:ಖಂ ಸ ಯೋಗೀ ಪರಮೋ ಮತಃ ।। *(೩೨)***

'ಎಲೈ ಅರ್ಜುನ! ಯಾರು (ಎಲ್ಲರಲ್ಲೂ ಆತ್ಮನನ್ನೇ ನೋಡುವುದರ ಫಲವಾಗಿ) ಎಲ್ಲಾ ಜೀವಿಗಳ ಸುಖ-ದು:ಖಗಳು ತನ್ನದೆಂದೇ ಭಾವಿಸುತ್ತಾನೋ, ಆ ಯೋಗಿಯೂ ಶ್ರೇಷ್ಠನೆಂದು ನನ್ನ ಅಭಿಪ್ರಾಯ.'

ಪರಮಾತ್ಮನ ಈ ಮಾತುಗಳು ಆಧ್ಯಾತ್ಮಿಕ ದೃಷ್ಟಿಯಿಂದ, ನೈತಿಕ ದೃಷ್ಟಿಯಿಂದ ಮತ್ತು ಮಾನಸಿಕ ದೃಷ್ಟಿಯಿಂದ ಬಹಳ ಪ್ರಾಮುಖ್ಯತೆಯನ್ನು ಹೊಂದಿವೆ.

ಆಧ್ಯಾತ್ಮಿಕ ದೃಷ್ಟಿಯಲ್ಲಿ ಇವು ಆತ್ಮ-ಪರಮಾತ್ಮರ ಅನ್ಯೋನ್ಯ ಸಂಬಂಧವನ್ನು ತಿಳಿಸುತ್ತದೆ. ನೈತಿಕ ದೃಷ್ಟಿಯಿಂದ ನೋಡಿದಾಗ ಇವು ನೈತಿಕತೆಯ ಅತ್ಯುನ್ನತ ಮೌಲ್ಯವನ್ನು ತೋರಿಸುತ್ತದೆ. ಇತರರನ್ನು ತನ್ನಂತೆಯೇ ಕಂಡು, ಅದಕ್ಕನುಸಾರವಾಗಿ ಭಾವಿಸುವುದು ಮತ್ತು ಅದರಂತೆಯೇ ನಡೆದುಕೊಳ್ಳುವುದು (ಇತರರ ಸುಖ-ದು:ಖಗಳನ್ನು ತನ್ನದೆಂದೇ ಅನುಭವಿಸುವುದು) ಇದೇ ಆ ಅತ್ಯುನ್ನತ ನೈತಿಕ ಮೌಲ್ಯ. ಸರ್ವಜೀವಿಗಳಲ್ಲಿ ಆತ್ಮವನ್ನು ಮತ್ತು ಆತ್ಮದಲ್ಲೇ ಸರ್ವ ಜೀವಿಗಳನ್ನು ಕಾಣುವುದು ಎಂಬುದರ ನೈತಿಕ ಸ್ಥರದ ಅರ್ಥ ಇದೇ!

ಇನ್ನು ಮನಃಶಾಸ್ತ್ರದ ದೃಷ್ಟಿಯಿಂದ ನೋಡಿದರೆ ಯೋಗಸ್ಥಿತಿ ಎಂಬುದು ಜೀವನವನ್ನು ಉಜ್ಜೀವನಗೊಳಿಸದ, ಕೇವಲ ಭ್ರಮೆ, ಕಲ್ಪನೆ ಅಲ್ಲ; ಅದು ಒಂದು ವಿಶೇಷವೂ, ವಿಭಿನ್ನವೂ ಆದ ಆಧ್ಯಾತ್ಮಿಕ ಪ್ರಜ್ಞೆ. ಹೀಗೆ ಯೋಗಸ್ಥಿತಿಯಿಂದ ಉಂಟಾದ ವಿಶೇಷ ಮನಸ್ಥಿತಿಯಲ್ಲಿ ಯಾವುದೇ ದು:ಖವು ವಿಚಲಿತಗೊಳಿಸಿದ ಆನಂದದ ಸ್ಥಿತಿಯಿರುತ್ತದೆ. ಸ್ವಾರ್ಥವೆನ್ನುವುದು ಸಂಪೂರ್ಣ ಅಳಿಸಿ ಹೋಗಿ ಸರ್ವಾತ್ಮಭಾವ, ವಿಶ್ವಾತ್ಮಭಾವವೆಂಬುದು ಅನುಭವಕ್ಕೆ ಬರುತ್ತದೆ.

### ಪ್ರಯೋಜನ

ಅತ್ಯುನ್ನತ ಅನುಭವವಾದ ಸರ್ವಾತ್ಮಭಾವವನ್ನು ಕುರಿತು ಸ್ವಲ್ಪ ಚಿಂತನೆ ನಡೆಸಿದ್ದಾಯಿತು. ಇಂತಹ ಸ್ಥಿತಿಯಿಂದ ಪ್ರಯೋಜನವೇನು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ! ಪ್ರಯೋ

ಜನವಿಲ್ಲದ್ದನ್ನು ಯಾರು ತಾನೆ ಪಡೆಯಲಿಚ್ಛಿಸುತ್ತಾರೆ, ಅಥವಾ ಯಾರಿಗೆ ತಾನೆ ಪಡೆಯುವ ಮನಸ್ಸಾಗುತ್ತದೆ? ಈ ಅನುಭವದಿಂದ ಅತಿಶ್ರೇಷ್ಠ ಪ್ರಯೋಜನವಿದೆ ಎಂಬುದು ಸ್ವಲ್ಪವಾದರೂ ವಿವೇಕ-ವೈರಾಗ್ಯಗಳಿರುವ ಎಲ್ಲರಿಗೂ ತಿಳಿಯುತ್ತದೆ.

ನಮ್ಮ ಎಲ್ಲ ಸುಖ-ದು:ಖಗಳಿಗೂ, ಬಂಧ-ಮೋಕ್ಷಗಳಿಗೂ ನಮ್ಮ ಮನಸ್ಸೇ ಕಾರಣವೆನ್ನಲಾಗಿದೆ. ಮನಸ್ಸನ್ನು ಸಂಯಮಕ್ಕೆ ಒಳಪಡಿಸಿ, ಶುದ್ಧಗೊಳಿಸಿ, ನಿಷ್ಠೆ ತಾಳ್ಮೆಯಿಂದ ಸಾಧನೆಯಲ್ಲಿ ತೊಡಗಿಸಿದಾಗ ಭಗವತ್ಕೃಪೆಯಿಂದ ಈ ಅನುಭವ ದೊರೆಯುತ್ತದೆ.

ಈ ಅನುಭವದಿಂದ ಸಾಧಕ ತನ್ನ ಸಹಜ ಸ್ಥಿತಿಯಾದ ಆನಂದವನ್ನು ಪಡೆಯುತ್ತಾನೆ, ನಿರ್ಭೀತನಾಗುತ್ತಾನೆ, ಅಜ್ಞಾನ ಸಂಪೂರ್ಣ ನಾಶವಾಗಿ ಅಲ್ಲಿ ಯಾವುದೇ ದು:ಖ-ದ್ವಂದ್ವಗಳಿಲ್ಲದಂತಾಗುತ್ತದೆ. ತನ್ನ ಸ್ವಸ್ಥಿತಿಯಲ್ಲಿ ಸ್ಥಿರವಾಗಿ ನಿಂತಿರುತ್ತಾನಾದ್ದರಿಂದ ಎಂತಹ ದು:ಖವೂ ಇವನನ್ನು ವಿಚಲಿತನಾಗಿಸುವುದಿಲ್ಲ.

ಇವೆಲ್ಲ ಸಾಧಕನಿಗೆ ಸ್ವಂತ ಪ್ರಯೋಜನವಾಯಿತು; ಸಮಾಜಕ್ಕೆ ಏನು ಪ್ರಯೋಜನ? ಈ ಸರ್ವಾತ್ಮಾನುಭವದ ಸ್ಥಿತಿಯಲ್ಲಿ ವ್ಯಕ್ತಿಯ ಸ್ವಾರ್ಥ ಒಂದಿಷ್ಟು ಇರುವುದಿಲ್ಲ. ಅಂತಹ ನಿಸ್ವಾರ್ಥ ವ್ಯಕ್ತಿಗಳ ಇಡೀ ಜೀವನವೇ ಇತರರ ಒಳಿತಾಗಿ, ಸಮಾಜದ ಒಳಿತಿಗಾಗಿ, ಪ್ರಜ್ಞಾಪೂರ್ಣ, ಸ್ವಾರ್ಥರಹಿತ ವ್ಯಕ್ತಿಗಳಿಂದಲ್ಲದೇ ಸಮಾಜಕ್ಕೆ ಇನ್ಯಾರಿಂದ ಒಳಿತಾಗಲು ಸಾಧ್ಯ? ಅಂಥವರು ಸುಮ್ಮನೆ ಇದ್ದರೂ ಅದೇ ದೊಡ್ಡ ಪ್ರಯೋಜನ. ಅವರ ಸತ್ಸಹವಾಸದಿಂದ ಇತರರಲ್ಲೂ ಶಾಂತಿ-ಧೈರ್ಯ-ಆನಂದಗಳು ಹರಡುತ್ತವೆ.

### ಮಾರ್ಗ - ಸಾಧನೆ

ಗುರಿ ಆಯಿತು, ಪ್ರಯೋಜನ ಗೊತ್ತಾಯಿತು; ಇನ್ನು ಮಾರ್ಗ ಯಾವುದು? ಗೀತೆಯಲ್ಲಿ ಪರಮಾತ್ಮ ಸುಲಭ ಉಪಾಯವಾದ ಭಕ್ತಿಯನ್ನು ಒಂದು ಮಾರ್ಗವಾಗಿ ಬೋಧಿಸಿದ್ದಾನೆ. ಜ್ಞಾನ ಮತ್ತು ಯೋಗ ಮಾರ್ಗಗಳ ಸಾಧನೆಯ ಅಂಶಗಳನ್ನು ಸೇರಿಸಿಕೊಂಡು ಸಮಗ್ರ ಮಾರ್ಗವಾಗಿ ಮುನ್ನಡೆಯಬಹುದೆಂದು ಮಾರ್ಗದರ್ಶನ ನೀಡಿದ್ದಾನೆ. ಭಗವಂತನನ್ನು- ಇಷ್ಟದೇವತೆಯನ್ನು ಪ್ರಾಮಾಣಿಕವಾಗಿ ಪ್ರೀತಿಸಿ, ನಾಮಸ್ಮರಣೆ ಮಾಡಿ, ಧ್ಯಾನ ಮಾಡುತ್ತಾ ಹೋದಂತೆ, ಭಗವಂತನ ಭಾವ ನಮ್ಮಲ್ಲಿಯೂ ಬಂದು ಬಿಡುತ್ತದೆ ಎಂಬುದು ಅನುಭವಿಗಳ ಮಾತು. ನಾವು ಯಾವುದನ್ನು ಕುರಿತು ಚಿಂತನೆ ಮಾಡುತ್ತೇವೆಯೋ ಯಾವುದನ್ನು, ಯಾರನ್ನು ಕುರಿತು ಧ್ಯಾನಿಸುತ್ತೇವೆಯೋ ಅವರ ಸ್ವಭಾವ ನಮ್ಮದಾಗುತ್ತದೆ; ಮುಂದುವರಿದು ಅವರ ಸ್ವರೂಪವೇ ನಮ್ಮ ಸ್ವರೂಪವೆಂದು ಅನುಭವಕ್ಕೆ ಬರುತ್ತದೆ.

ಗುರುಗಳ ಮಾರ್ಗದರ್ಶನದಂತೆ ಪ್ರಾಮಾಣಿಕತೆ, ನಿಷ್ಠೆಯಿಂದ ಸಾಧನೆಯಲ್ಲಿ ತೊಡಗಬೇಕು. ಸಾಧನೆಯ ವಿವಿಧ ಅಂಶಗಳನ್ನು ಶ್ರದ್ಧೆಯಿಂದ ಮಾಡುತ್ತಾ ಮುಂದುವರೆದರೆ ಗುರಿ ಸೇರಬಹುದು. ಗೀತೆಯಲ್ಲಿ ಹಲವು ಕಡೆಗಳಲ್ಲಿ ಸಿದ್ಧಪುರುಷನ (ಜ್ಞಾನಿ,ಭಕ್ತ, ಯೋಗಿ) ಲಕ್ಷಣಗಳನ್ನು ಪ್ರಶ್ನೋತ್ತರಗಳ ರೂಪದಲ್ಲಿ ಭಗವಂತ ವಿವರಿಸಿದ್ದಾನೆ. ಸಿದ್ಧಪುರುಷರ ಲಕ್ಷಣಗಳು ನಮಗೆ ಸಾಧನಗಳು - ಮಾರ್ಗ. ಆ ಲಕ್ಷಣಗಳನ್ನು ತಿಳಿದು, ಭಾವಿಸಿ, ನಾವು ಅವರಂತೆಯೇ ನಡೆಯಲು ಪ್ರಯತ್ನ ಮಾಡಬೇಕು. ಅವು ತುಂಬ ಎತ್ತರವೆಂಬುದು ಸತ್ಯವೇ; ಆದರೆ ನಾವು ಮೊದಲ ಹೆಜ್ಜೆ ಇಡಬೇಕಲ್ಲವೆ? ಗುರುಕೃಪೆ, ಭಗವದನುಗ್ರಹಗಳಿಗಾಗಿ ಪ್ರಾರ್ಥಿಸುತ್ತಾ ಅವುಗಳನ್ನು ಪಡೆಯುವ ಯೋಗ್ಯತೆಗಾಗಿ ಪ್ರಾರ್ಥಿಸುತ್ತ ಮುಂದುವರಿಯಬೇಕು!

### ಕೊನೆಯ ಮಾತು

ಇಷ್ಟೆಲ್ಲ ಚಿಂತನೆಯಾದ ನಂತರ ಇನ್ನೊಂದು ಪ್ರಶ್ನೆ ಮನಸ್ಸಿನಲ್ಲಿ ಏಳಬಹುದು. ಈ ಅನುಭವ ಸಾಧ್ಯವೆ? ಅದನ್ನು ನಾವು ಪಡೆಯಬಹುದೇ ಅಥವಾ ಬರೀ ಪುಸ್ತಕಗಳಲ್ಲಿ ಓದಿಕೊಳ್ಳುವುದಷ್ಟೆಯೆ?

ಈ ಅನುಭವ ನಮ್ಮ ಪಾಲಿಗೆ ಎತ್ತರದ ಆದರ್ಶವೆನ್ನುವುದೇನೋ ಸ್ಪಷ್ಟ, ಆದರೆ ಈ ಅನುಭವವನ್ನು ಪಡೆದವರಿದ್ದಾರೆ. ಆದರ್ಶ ಅಥವಾ ಗುರಿ ಎತ್ತರವಿದ್ದಷ್ಟು ಅದಕ್ಕೆ ತಕ್ಕ ಪರಿಶ್ರಮ ಬೇಕಲ್ಲವೆ? ಪ್ರಾಮಾಣಿಕ ಪ್ರಯತ್ನಬೇಕು, ಶ್ರದ್ಧೆಯಿರಬೇಕು; ''ಇಂಥದೊಂದು ಸ್ಥಿತಿಯಿದೆ, ಅದನ್ನು ಪಡೆಯುವುದೇ ಜೀವನದ ಗುರಿ, ಅದನ್ನು ಪಡೆದರೆ ಎಲ್ಲಾ ಸಮಸ್ಯೆಗಳ ಸಂಶಯ ಪರಿಹಾರವಾಗುತ್ತದೆ. ನಾನು ಪಡೆಯಬಲ್ಲೆ, ಅದು ಭಗವತ್ಕೃಪೆಯಿಂದ ಸಾಧ್ಯ'' ಎಂಬ ದೃಢ ವಿಶ್ವಾಸವೇ ಶ್ರದ್ಧೆ.

ನಮಗೆ ಈಗ ಸಾಧ್ಯವಾಗದ್ದನ್ನೆಲ್ಲಾ, ಕಷ್ಟವಾದದ್ದನ್ನೆಲ್ಲಾ ಅಪ್ರಾಯೋಗಿಕ ಎಂದರೆ ಅದು ಸರಿಯೆ? ಇದೇ ಅಶ್ರದ್ಧೆ. ಈ ಆದರ್ಶದ ಕುರಿತು ಅರ್ಥ ಮಾಡಿಕೊಳ್ಳುವ, ಭಾವಿಸುವ ಪ್ರಾಮಾಣಿಕ ಪ್ರಯತ್ನ ಮಾಡುವ ಮನಃಸ್ಥಿತಿಯನ್ನು ತಲುಪಬೇಕಾಗುತ್ತದೆ.

ಅಂತಹ ಶ್ರದ್ಧೆಯನ್ನು , ಶುದ್ಧ ಭಕ್ತಿಯನ್ನು ಪರಮಾತ್ಮನು ನಮಗೆ ಕರುಣಿಸಲಿ.

''ಸಂದೇಹಗಳು ನನ್ನನ್ನು ಕಾಡಲು ಆರಂಭಿಸಿದಾಗ, ನನ್ನ ಮುಖದ ಮೇಲೆ ಭ್ರಮನಿರಸನಗಳು ದಿಟ್ಟಿಸಿ ನೋಡಿದಾಗ, ನನಗೆ ಯಾವುದೇ ಭರವಸೆಯ ಕಿರಣಗಳು ಕಾಣಿಸದಿದ್ದಾಗ ನಾನು ಭಗವದ್ಗೀತೆಯ ಕಡೆಗೆ ತಿರುಗುತ್ತೇನೆ. ಅಲ್ಲಿ ನನಗೆ ಸಾಂತ್ವನ ನೀಡುವ ಶ್ಲೋಕವನ್ನು ಅರಸುತ್ತೇನೆ. ತಕ್ಷಣ ನಾನು, ದುಃಖ ಉಮ್ಮಳಿಸಿ ಬರುತ್ತಿದ್ದರೂ, ನಗೆ ಬೀರತೊಡಗುತ್ತೇನೆ.

— ಮಹಾತ್ಮಾ ಗಾಂಧೀಜಿ